ನಿಯಮಾವಳಿ ಪ್ರಕಾರ ತೆಗೆದುಕೊಂಡು ನನಗೆ ಅವಕಾಶ ಮಾಡಿಕೊಡಬೇಕು, ಇದು ಬಹಳ ಜ್ವಲಂತವಾದ ಸಮಸ್ಯೆಯಾಗಿದೆ.

ಅಧ್ಯಕ್ಷರು: ನಾನೂ ಸಹ ಕಾತುರನಾಗಿದ್ದೇನೆ, ಈ ವಿಚಾರವನ್ನು ಆಮೇಲೆ ಖಂಡಿತ ತೆಗೆದುಕೊಳ್ಳುತ್ತೇನೆ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ಹುಬ್ಬಳ್ಳಿಯ ರಸ್ತೆಗಳನ್ನು ಅಗಲಗೊಳಿಸಿ ಸೌಂದರ್ಯಗೊಳಿಸುವುದು

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯಲ್ಲಿ ಮಾಸ್ಟರ್ ಪ್ಲಾನ್ ಅನುಷ್ಠಾನಗೊಳಿಸುವ ಬಗ್ಗೆ ಈಗಾಗಲೇ ಸುದ್ದಿ ಇದೆ. ಈ ಮಾಸ್ಟರ್ ಪ್ಲಾನ್ ಅನುಷ್ಠಾನಗೊಳಿಸುವ ಬಗ್ಗೆ ನಾನು ವಿರೋಧ ವ್ಯಕ್ತ ಪಡಿಸುವುದಿಲ್ಲ. ಆದರೆ ಮಾಸ್ಟರ್ ಪ್ಲಾನ್ ಪ್ರಕಾರ ರಸ್ತೆಗಳನ್ನು ಅಗಲೀಕರಣ ಮತ್ತು ಸೌಂದರ್ಯೀಕರಣದ ಬಗ್ಗೆ ಮೊದಲು ಸಾರ್ವಜನಿಕರಿಗೆ ಮಾಹಿತಿ ಕೊಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುತ್ತಿದ್ದೇನೆ. ಯಾವ್ಯಾವ ರಸ್ತೆಗಳನ್ನು ಅಗಲೀಕರಣ ಮಾಡುತ್ತಿದ್ದಾರೆ ಮತ್ತು ಮಾಸ್ಟರ್ ಪ್ಲಾನ್‌ನನ್ನು ಸರ್ಕಾರ ಯಾವಾಗ ಮಂಜೂರು ಮಾಡಿದೆ? ರಸ್ತೆಯ ಅಗಲೀಕರಣದ ಸಂದರ್ಭದಲ್ಲಿ ಮಾಲೀಕರಿಗೆ ಏನಾದರೂ ಪರಿಹಾರಧನವನ್ನು ಕೊಡುತ್ತಾರೆಯೇ, ಇಲ್ಲವೆ? ಯಾವಾಗ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಾರೆ? ಇದರ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಕೊಟ್ಟು ಈ ಮಾಸ್ಟರ್ ಪ್ಲಾನ್ ಅನುಷ್ಠಾನಗೊಳಿಸಿದರೆ ಜನರಿಗೆ ಯಾವುದೇ ರೀತಿಯ ಭಯಭೀತಿ ಇರುವುದಿಲ್ಲ. ಆದರೆ ಸಾರ್ವಜನಿಕರಿಗೆ ಯಾವುದೇ ರೀತಿಯ ತಿಳುವಳಿಕೆ ಕೊಡದೆ, ಮಾಸ್ಟರ್ ಪ್ಲಾನ್ ಅನುಷ್ಠಾನಗೊಳಿಸತಕ್ಕಂಥದ್ದು ಏನು ಒಂದು ಸುದ್ದಿ ಹರಡಿದೆ, ಅದಕ್ಕೆ ಸರ್ಕಾರ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕೆಂದು ನಾನು ಮಾನ್ಯ ನಗರಾಭಿವೃದ್ಧಿ ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಸರ್ಕಾರದ ಪರವಾಗಿ ಯಾರಾದರೂ ಒಬ್ಬರು ಉತ್ತರ ಕೊಡಿ.

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ರಾಜ್ಯ ಸಚಿವರು): ಈ ಕೆಲಸ ಮುನಿಸಿಪಲ್ ಕಾರ್ಪೊರೇಷನ್‌ಗೆ ಬರುವುದಿಲ್ಲ. ಕಮೀಷನರ್‌ರವರಿಂದ ಈಗಾಗಲೇ ಅದರ ಮಾಹಿತಿಯನ್ನು ತರಿಸಲಾಗಿದೆ, ಅಲ್ಲಿ ಇನ್ನು ಕೆಲಸವನ್ನು ಪ್ರಾರಂಭ ಮಾಡಿಲ್ಲ.

ಅಧ್ಯಕ್ಷರು: ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶ ಇಲ್ಲ. ತಾವು ನನಗೆ ಸಹಕರಿಸಬೇಕು, ನಾನು ಕೆಲವು ನಿಯಮಾವಳಿಗಳನ್ನು ಪಾಲಿಸಬೇಕಾಗುತ್ತದೆ. ಜಗದೀಶ್ ಶೆಟ್ಟರ್‌ರವರೆ ನೀವು ಒಳ್ಳೆಯ ಶಿಸ್ತಿನ ಮನುಷ್ಯ ನೀವೇ ಹೀಗೆ ಮಾಡಿದರೆ ಹೇಗೆ? ಶ್ರೀರಾಮರೆಡ್ಡಿಯವರೆ ನೀವು ಪ್ರಸ್ತಾಪ ಮಾಡಿ.